ಪೇರೆಂಟಿಂಗ್

ದಿವ್ಯಾಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. ಮಾತು ಆಡಹೊರಟರೆ ಕುತ್ತಿಗೆ ಬಿಗಿದಂತಾಗಿ ಧ್ವನಿ ಅಡಗುತ್ತಿತ್ತು. ಜಗಳವಾಡಲೂ ಶಕ್ತಿಯಿಲ್ಲದ ಅಸಹಾಯಕತೆ ಮೈ ಮನಸ್ಸುಗಳನ್ನು ತುಂಬಿತ್ತು. ಮಡಿಲಲ್ಲಿ ಮಲಗಿದ್ದ ನಾಲ್ಕು ದಿನಗಳ ಮಗು ನಿದ್ದೆಯಲ್ಲಿಯೇ ನಗುತ್ತಿತ್ತು. ಅಮ್ಮನಿಗೆ ಇದೆಲ್ಲವನ್ನೂ ಹೇಗೆ ಅರ್ಥಮಾಡಿಸುವುದು? ‘ಅದು ಹಾಗಲ್ಲ ಅಮ್ಮಾ’ ಎಂದೇನೋ ಹೇಳಹೊರಟವಳಿಗೆ, ‘ನಾವೇನು ನಿಮ್ಮನ್ನೆಲ್ಲ ಹೆತ್ತು ದೊಡ್ಡವರಾಗಿ ಮಾಡಿಲ್ವೇನು? ಆ ಡಾಕ್ಟರ ಅಮ್ಮನೂ ಹೀಗೇ ಮಾಡಿರ್ತಾಳೆ ತಿಳ್ಕೋ. ನಿಂಗವೆಲ್ಲ ಗೊತ್ತಾಗಲ್ಲ... ನನ್ ಮೊಮ್ಮಗನಿಗೆ ಏನ್ ಮಾಡ್ಬೇಕು ನಂಗೆ ಚೆನ್ನಾಗಿ ಗೊತ್ತಿದೆ...’ ಎಂದು ಮರುಮಾತಿಗೆ ಅವಕಾಶವೇ ಇಲ್ಲದ ಹಾಗೆ ಹೊರಟು ಹೋಗಿದ್ದಳು.

ನಡೆದಿದ್ದಿಷ್ಟು: ದಿವ್ಯಾಳಿಗೆ ಚೊಚ್ಚಲ ಹೆರಿಗೆ. ಬೆಂಗಳೂರಿನಲ್ಲಿ ಆಸ್ಪತ್ರೆಗೆಲ್ಲ ಕರೆದುಕೊಂಡು ಹೋಗುವುದು ಸುಲಭ ಎಂದು ಗಂಡ ಇಲ್ಲಿಯೇ ಇರಿಸಿಕೊಂಡಿದ್ದ. ಡಾಕ್ಟರ್ ಕೊಟ್ಟ ಹೆರಿಗೆಯ ಡೇಟ್‌ಗೆ ಅಮ್ಮನೂ ಊರಿಂದ ಬಂದಿಳಿದಿದ್ದಳು. ಆಸ್ಪತ್ರೆ ಸೇರಿದ ಮರುದಿನ ಬೇನೆ ಶುರುವಾಗಿ, ನಾರ್ಮಲ್ ಡೆಲಿವರಿಯೇ ಆಗಿತ್ತು. ನಂತರ ವಾರ್ಡ್‌ಗೆ ಹಾಕಿದಾಗಲೇ ಒಂದೊಂದಾಗಿ ಸಮಸ್ಯೆಗಳು ಶುರುವಾಗಿದ್ದು. ‘ಹಸಿ ಬಾಣಂತಿಗೆ ಹೊಟ್ಟೆ ಒಣಗಿಸಬೇಕು, ಇಲ್ಲಾಂದ್ರೆ ನಂಜಾಗತ್ತೆ’ ಎಂದು ಅಮ್ಮ ನೀರೂ ಕುಡಿಯುವುದು ಬೇಡ ಎಂದು ಹೇಳಿದ್ದರು. ಆದರೆ ಅವಳನ್ನು ನೋಡಲು ಬಂದ ಡಾಕ್ಟರ್‌ಗೆ ಈ ವಿಷಯ ತಿಳಿದು ಬೈದರು. ‘ಚೆನ್ನಾಗಿ ತಿಂದು ಉಂಡು ಮಾಡಿ... ಇಲ್ಲಾಂದ್ರೆ ಮಗುವಿಗೆ ಅಮ್ಮನಿಗೆ ಇಬ್ಬರಿಗೂ ತೊಂದರೆ’ ಎಂದು ಎಚ್ಚರಿಕೆಯನ್ನೂ ಕೊಟ್ಟು ಹೋಗಿದ್ದರು. ಡಿಸ್ಚಾರ್ಜ್ ಮಾಡುವ ಸಮಯದಲ್ಲಿಯೂ ‘ಪಥ್ಯ ಅದೂ ಇದೂ ಅಂತ ಸರಿಯಾಗಿ ತಿನ್ನದೆ, ನೀರುಕುಡಿಯದೇ ಇದ್ದರೆ ತೊಂದರೆಯಾಗತ್ತೆ. ಮಗುವಿಗೆ ಮಾತ್ರ ಇನ್ನು ಆರು ತಿಂಗಳು ತಾಯಿಯ ಎದೆಹಾಲು ಬಿಟ್ಟು ಬೇರೆ ಏನಂದ್ರೆ ಏನೂ ಕೊಡಬಾರದು. ನೀರೂ ಕೊಡಬಾರದು. ನೆನಪಿಟ್ಟುಕೊಳ್ಳಿ’ ಎಂದು ಎರಡೆರಡು ಸಲ ಎಚ್ಚರಿಸಿ ಹೇಳಿದ್ದರು. ಅವರ ಎದುರಿಗೆ ಸುಮ್ಮನೆ ತಲೆಯಾಡಿಸಿದ್ದ ಅಮ್ಮ ಮನೆಗೆ ಬಂದಿದ್ದೇ ಬೇರೆಯದೇ ರಾಗ ಶುರುಮಾಡಿದ್ದರು.

‘ಬರೀ ಹಾಲು ಕೊಟ್ರೆಲ್ಲ ಪೂರೈಸಲಾಗತ್ತಾ? ಜೀರಿಗೆ ನೀರು ಕುಡಿಸಿದ್ರೆ ತುಂಬ ಒಳ್ಳೆಯದು. ಡಾಕ್ಟರು ಎಲ್ಲಾನೂ ಹೇಳ್ತಾರೆ. ಯಾವ್ದು ಕೇಳ್ಬೇಕು, ಯಾವ್ದು ಕೇಳ್ಬಾರದು ಅಂತ ನಮಗೆ ಗೊತ್ತಿರ್ಬೇಕು’ ಅನ್ನಲು ಶುರುಮಾಡಿದ್ದರು. ಶಿಶುವಿನ ನಾಲಿಗೆಗೆ ನೆಕ್ಕಿಸುವ ಬಗೆಬಗೆಯ ಬೇರು, ಚಕ್ಕೆಗಳ ಉದ್ದ ಪಟ್ಟಿಯೂ ಅವಳ ಬಳಿಯಿತ್ತು. ಇದನ್ನು ನೋಡಿ ಅಮ್ಮನಿಗೆ ಹೇಗೆ ತಿಳಿಹೇಳುವುದು ಎಂದೇ ಗೊತ್ತಾಗದೆ ದಿವ್ಯಾ ಅಸಹಾಯಕಳಾಗಿ ಕೂತಿದ್ದಳು.

***

ಬಹುತೇಕ ಎಲ್ಲ ಕುಟುಂಬದಲ್ಲಿಯೂ ಈ ಸಂದರ್ಭ ಎದುರಾಗಿರುತ್ತದೆ. ಪಾತ್ರಗಳು, ಸನ್ನಿವೇಶದ ತೀವ್ರತೆಯಲ್ಲಿ ಹೆಚ್ಚೂಕಮ್ಮಿ ಇರಬಹುದಷ್ಟೆ. ಆದರೆ ತಲೆಮಾರುಗಳಿಂದ ನಡೆಸಿಕೊಂಡು ಬಂದ ಶಿಶು ಆರೈಕೆಯ ಪದ್ಧತಿಗಳು ಮತ್ತು ವೈದ್ಯವಿಜ್ಞಾನ ಅನುಸರಿಸುವ ಚಿಕಿತ್ಸಾವಿಧಾನಗಳ ನಡುವಿನ ಸಂಘರ್ಷಗಳು ಎಲ್ಲ ಮನೆಗಳಲ್ಲಿಯೂ ಇದ್ದೇ ಇರುತ್ತವೆ. ಇದರ ಜೊತೆಗೆ ಶಿಶು ಆರೋಗ್ಯ, ಆರೈಕೆಗಳ ಬಗ್ಗೆ ಇರುವ ಅಜ್ಞಾನ, ಅರೆ ತಿಳಿವಳಿಕೆಗಳೂ ಆತಂಕವನ್ನು ಹೆಚ್ಚಿಸುತ್ತವೆ. ಇದರಿಂದ ತಪ್ಪಿಸಿಕೊಳ್ಳಲು ಇರುವ ಒಂದೇ ದಾರಿ ಸಾಧ್ಯವಾದಷ್ಟೂ ಈ ಬಗ್ಗೆ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬೇಕು.

ಮಗು ಜನಿಸಿದ ನಂತರದ ಮೊದಲ ಐದು ವರ್ಷಗಳ ಅವಧಿಯನ್ನು ‘ವಿಶೇಷ ಕಾಳಜಿಯ ಅವಧಿ’ ಎಂದು ಪರಿಗಣಿಸಿ, ಸರ್ಕಾರ ಒಂದು ಪ್ರತ್ಯೇಕ ಕಾರ್ಯಕ್ರಮವನ್ನೇ ಹಮ್ಮಿಕೊಂಡಿದೆ. ಅದರಲ್ಲೂ ಮೊದಲ ವರ್ಷವಂತೂ ಮಗು ದೈಹಿಕವಾಗಿ ಮತ್ತು ಮಾನಸಿಕವಾಗಿ ಅತ್ಯಂತ ಕ್ಷಿಪ್ರಗತಿಯಲ್ಲಿ ಬೆಳವಣಿಗೆ ಹೊಂದುವ ವಯೋಮಾನ. ‘ಶಿಶು’ವೆಂದು ಪರಿಗಣಿಸಲಾಗುವ ಈ ಅವಧಿಯಲ್ಲಿ ಮಗು ಸಂಪೂರ್ಣವಾಗಿ ಹಿರಿಯರ ಅವಲಂಬನೆಯಲ್ಲಿ ಇರುತ್ತದೆ.

ನಂತರದ ಎರಡು ವರ್ಷಗಳನ್ನು ‘ಟಾಡ್ಲರ್ ಪೀರಿಯಡ್’ ಎನ್ನಲಾಗುತ್ತದೆ. ಲವಲವಿಕೆಯಿಂದ ಓಡಾಡಲು ಕಲಿತ ಈ ವಯಸ್ಸಿನಲ್ಲಿ ಮಗುವಿಗೆ ನೋಡಿದ್ದೆಲ್ಲವೂ ಕೌತುಕಮಯವೇ. ಆನಂತರದ ಎರಡು ವರ್ಷಗಳನ್ನು ಶಾಲಾಪೂರ್ವ ಅವಧಿ ಎಂದು ಪರಿಗಣಿಸಲಾಗುತ್ತದೆ. ಪ್ರತಿಯೊಂದು ಹಂತದಲ್ಲೂ ಮಗು ದೈಹಿಕವಾಗಿ ಮತ್ತು ಮಾನಸಿಕವಾಗಿ ಬೇರೆ ಬೇರೆ ರೀತಿಯಲ್ಲಿ ಬೆಳವಣಿಗೆ ಹೊಂದುತ್ತದೆ. ಮಗುವಿನ ಆಹಾರವೂ ಒಂದೊಂದು ಅವಧಿಗೆ ಒಂದೊಂದು ಬಗೆಯದಾಗಿರುತ್ತದೆ. ಹಾಗೆಯೇ ಮಗುವನ್ನು ಕಾಡುವ ಆರೋಗ್ಯ ಸಮಸ್ಯೆಗಳೂ ವಯಸ್ಸಿಗನುಗುಣವಾಗಿ ಬೇರೆ ಬೇರೆ ತೆರನಾಗಿರುತ್ತವೆ. ಆಹಾರ ಪೂರೈಕೆಯ ವ್ಯತ್ಯಯದಿಂದ ಈ ವಯಸ್ಸಿನ ಮಕ್ಕಳು ಅಪೌಷ್ಟಿಕತೆಗೆ ತುತ್ತಾಗುವ ಸಾಧ್ಯತೆ ಹೆಚ್ಚು.

ಮೊದಲ ಐದು ವರ್ಷಗಳ ಅವಧಿಯಲ್ಲಿ ರೋಗ ನಿರೋಧಕ ವ್ಯವಸ್ಥೆಯೂ ಪರಿಪೂರ್ಣವಾಗಿ ವಿಕಸಿತಗೊಂಡಿರುವುದಿಲ್ಲ. ಈ ಕಾರಣದಿಂದ ನಾನಾ ಸೋಂಕು ರೋಗಗಳೂ ಈ ವಯೋಮಾನದ ಮಕ್ಕಳಲ್ಲಿ ಹೆಚ್ಚು. ಐದು ವರ್ಷದ ಒಳಗಿನ ಮಕ್ಕಳಿಗೆ ನೀಡಬೇಕಾದ ಆಹಾರ, ಬೆಳವಣಿಗೆಯ ಹಂತಗಳು, ಕಾಡುವ ಸಾಮಾನ್ಯ ಆರೋಗ್ಯ ಸಮಸ್ಯೆಗಳು ಮತ್ತು ವಹಿಸಬೇಕಾದ ಕೆಲವು ಮುಂಜಾಗ್ರತಾ ಕ್ರಮಗಳ ಕುರಿತು ಒಂದು ಸ್ಥೂಲ ನೋಟ ಹರಿಸೋಣ.

